**ದಿಃ 20.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಪಿ ಬಿ ಎಸ್ ವಕೀಲರಿಂದಃ

ನನ್ನ ಪರವಾಗಿ ದಿನಾಂಕ 12.08.2015ರ ಅಧಿಕಾರ ಪತ್ರ ಹಾಜರುಮಾಡಿದ್ದು ಸದರಿ ದಾಖಲೆಗೆ ವಾದಿ ಪರ ವಕೀಲರು ಅದನ್ನು ಸಾಕ್ಷಿದಾರರ ತಂದೆ ಆಸ್ಪತ್ರೆಯಲ್ಲಿದ್ದ ಕಾರಣ ಬರೆದುಕೊಟ್ಟಿರುವುದಿಲ್ಲ ಎಂದು ತಕರಾರು ಮಾಡಿದ್ದು ಸದರಿ ತಕರಾರನ್ನು ಸಾಬೀತು ಪಡಿಸುವ ಶರ್ತಿಗೆ ಒಳಪಟ್ಟು ನಿಡಿ-17 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಡಿ-17ಎ ಎಂದು ಹಾಗೂ 1ನೇ ಪ್ರತಿವಾದಿಯ ಸಹಿಯನ್ನು ನಿಪಿ-17ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಜಿ ಎಸ್ ವಕೀಲರಿಂದಃ

ನನ್ನ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಹೆಣ್ಣು ಹಾಗೂ ಒಂದು ಗಂಡು ಎಂದು ನುಡಿಯುತ್ತಾರೆ. ನಾವು ಅಳಿಯ ಸಂತಾನ ಕಾನೂನು ಪಾಲನೆ ಮಾಡುತ್ತೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನನ್ನ ತಂದೆ ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ಶಿಕ್ಷಕರು ಎಂದು ನುಡಿಯುತ್ತಾರೆ. ಯಾವ ಶಾಲೆ ಎಂದರೆ ಸಾಕ್ಷಿ ರಾಮಕೃಷ್ಣ ಶಾಲೆ ಹರೇಕಳ ಎಂದು ನುಡಿಯುತ್ತಾರೆ. ಆ ರೀತಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 53 ಎಂದು ನುಡಿಯುತ್ತಾರೆ. ಸದರಿಯವರು ನಿವೃತ್ತಿಯಾಗುವಾಗ ಯಾವ ಹುದ್ದೆಯಲ್ಲಿ ಇದ್ದರು ಎಂರೆ ಸಾಕ್ಷಿ ಮುಖ್ಯೋಪಾದ್ಯಾಯರು ಎಂದು ನುಡಿಯುತ್ತಾರೆ. ನನ್ನ ತಂದೆ ಬೇರೆ ಬೇರೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಆ ಸಮಯಕ್ಕೆ ನನ್ನ ತಂದೆಗೆ ಎಷ್ಟು ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಜೀವಮಾನದಲ್ಲಿ ಎಷ್ಟು ಸಂಬಳ ಬರುತ್ತಿತ್ತು ಎಂದು ವಿಚಾರ ಮಾಡಿಲ್ಲ ಎಂದರೆ ಸಾಕ್ಷಿ ನಿವೃತ್ತಿ ಯಾದ ನಂತರ ತಿಂಗಳಿಗೆ ರೂ.12,000/- ಬರುತ್ತಿತ್ತು ಎಂದು ನುಡಿಯುತ್ತಾರೆ. ಸದರಿಯವರು ನಿವೃತ್ತಿಯಾದ ನಂತರ ರೂ.18,800/- ಪಿಂಚಣಿ ಬರುತ್ತಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ತನ್ನ ಗಂಡನಿಗೆ ರೂ.18,800/- ಪಿಂಚಣಿ ಬರುತ್ತಿತ್ತು ಎಂದು ಹೇಳಿರುವ ವಿಚಾರ ತಿಳಿದುಕೊಂಡಿದದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ಆ ರೀತಿ ಬರೆದ ವಿಚಾರ

ಸರಿಯಿಲ್ಲ ಎಂದು ವಕೀಲರಿಗೆ ಹೇಳಿದ್ದೇನಾ ಎಂದರೆ ಸಾಕ್ಷಿ ಹೇಳಿರುವುದಾಗಿ ನುಡಿಯುತ್ತಾರೆ. ನನ್ನ ತಂದೆಗೆ ಅವರು ಕೆಲಸ ಮಾಡುತ್ತಿದ್ದ ಶಾಲೆಯಿಂದ ಎಷ್ಟು ಪಿಂಚಣಿ ನೀಡುತ್ತಿದ್ದರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ನಿವೃತ್ತಿ ಆದ ನಂತರ ರೂ.1,75,000/- ಹಣ ಬಂದಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಯಾವಾಗ ನಿವೃತ್ತಿಯಾದರು ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಯಾವ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹರೇಕಳ ಗ್ರಾಮ ಎಂದು ನುಡಿಯುತ್ತಾರೆ. ನನ್ನ ತಂದೆ ಕುವೆತ್ತಬೈಲು ಎಂಬ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆ ಅದನ್ನು ಹಾಜರುಮಾಡಬಹುದು ಎಂದರೆ ಸಾಕ್ಷಿ ಹಾಜರುಮಾಡಬಹುದಾಗಿ ನುಡಿಯುತ್ತಾರೆ.

2ನೇ ಪ್ರತಿವಾದಿ ಏನಾಗಬೇಕು ಎಂದರೆ ಸಾಕ್ಷಿ ತಮ್ಮ ಎಂದು ನುಡಿಯುತ್ತಾರೆ.

ನನ್ನ ತಂದೆ ಜೀವಂತ ಇರುವಾಗ ಅವರ ಜೊತೆ ಯಾರು ಯಾರು ಇದ್ದರು ಎಂದರೆ ಸಾಕ್ಷಿ ತಾನು, ತನ್ನ ತಂದೆ, ತನ್ನ ಹೆಂಡತಿ ಹಾಗೂ ಮಕ್ಕಳು ಎಂದು ನುಡಿಯುತ್ತಾರೆ. ವಾದಿ ಎಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಕುವೆತ್ತಬೈಲು ನಲ್ಲಿ ಎಂದು ನುಡಿಯುತ್ತಾರೆ.

3ನೇ ಪ್ರತಿವಾದಿ ಎಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಪಜೀರು ನಲ್ಲಿ ಎಂದು ನುಡಿಯುತ್ತಾರೆ.

ನನ್ನ ತಂದೆ ಜೊತೆ ವಾದಿ, ಹಾಗೂ 2ನೇ ಪ್ರತಿವಾದಿ ಮಾತ್ರ ವಾಸ ಇದ್ದದ್ದು, ನಾನು ಹಾಗೂ ನನ್ನ ಹೆಂಡತಿ ಬೇರೆ ವಾಸ ಇದ್ದೆವು ಎಂದರೆ ಸುಳ್ಳು. ನನ್ನ ವಿಳಾಸ ಎಲ್ಲಿ ಇದೆ ಎಂದು ತೋರಿಸಲು ಪಡಿತರ ಚೀಟಿ ಹಾಗೂ ಆಧಾರ ಕಾರ್ಡ್ ಹಾಜರುಮಾಡಬಹುದು ಎಂದರೆ ನಿಜ. ನಾನು ಸದರಿ ದಾಖಲೆಗಳ ಪ್ರಕಾರ ಹೆಂಡತಿ ಜೊತೆ ವಾಸ ಇದ್ದ ಕಾರಣ ಅದನ್ನು ಹಾಜರುಮಾಡಿಲ್ಲ ಎಂದರೆ ಸುಳ್ಳು.

ನನಗೆ ಏನು ಕೆಲಸ ಇದೆ ಎಂದರೆ ಸಾಕ್ಷಿ ಲಾರಿಯ ಮಾಲಿಕರು ಎಂದು ನುಡಿಯುತ್ತಾರೆ. ನನ್ನ ಬಳಿ ಎಷ್ಟು ಲಾರಿ ಇದೆ ಎಂದರೆ ಸಾಕ್ಷಿ 10 ಲಾರಿ ಎಂದು ನುಡಿಯುತ್ತಾರೆ. ಸದರಿ 10 ಲಾರಿಗಳ ಕುರಿತು ನನ್ನ ಬಳಿ ದಾಖಲೆ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ 10 ಲಾರಿಗಳು ನನ್ನ ಮಾಲೀಕತ್ವದಲ್ಲಿ ಇತ್ತು

ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಲಾರಿಗಳ ಆರ್ ಸಿ ಪುಸ್ತಕ ಹಾಗೂ ಪರ್ಮಿಟ್ ನನ್ನ ಬಳಿ ಇದ್ದರೆ ಅದನ್ನು ಹಾಜರುಮಾಡಬಹುದಾ ಎಂದರೆ ಸಾಕ್ಷಿ ಮಾಡಬಹುದು ಎಂದು ನುಡಿಯುತ್ತಾರೆ. ಸದರಿ ಲಾರಿಗಳು ಇದೆ ಎನ್ನುವ ಬಗ್ಗೆ ವಾದಿ ಏನು ತಿಳಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಾನು ಎಷ್ಟು ಲಾರಿ ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿ 10 ಸೆಕೆಂಡ್ ಹ್ಯಾಂಡ್ ಲಾರಿಗಳನ್ನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಲಾರಿಗಳ ಸಂಖ್ಯೆ ಏನು ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಲಾರಿಗಳ ಕುರಿತು ದಾಖಲೆ ಹಾಜರುಮಾಡಬಹುದಾ ಎಂದರೆ ಸಾಕ್ಷಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ದಾವೆ ಹಾಕುವ ಸಮಯದಲ್ಲಿ ದಾಖಲೆಗಳು ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಲಾರಿಯ ಬೆಲೆ ಲಕ್ಷಗಟ್ಟಲೆ ಇದೆ ಎಂದರೆ ಸಾಕ್ಷಿ ಒಂದು ಲಾರಿಗೆ ರೂ.50,000/- ಎಂದು ನುಡಿಯುತ್ತಾರೆ. ನಾನು ಮಾರಾಟಗಾರರಿಗೆ ಲಾರಿ ಖರೀದಿ ಕುರಿತು ಹಣ ನೀಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಸದರಿ ಲಾರಿಗಳಿಂದ ತುಂಬಾ ಉತ್ಪತ್ತಿ ಬರುತ್ತಿತ್ತು ಎಂದರೆ ನಿಜ. ಸದರಿ ಲಾರಿಗಳಿಂದ ಒಟ್ಟು ಎಷ್ಟು ಉತ್ಪತ್ತಿ ಬರುತ್ತಿತ್ತು ಎಂದರೆ ಸಾಕ್ಷಿ ಒಂದು ಲಾರಿಯಿಂದ ತಿಂಗಹಳಿಗೆ ರೂ.15000/- ಎಂದು ನುಡಿಯುತ್ತಾರೆ.

ನಾನು ಲಾರಿಯ ಉತ್ಪತ್ತಿಯ ಕುರಿತು ಆದಾಯ ತೆರಿಗೆ ಪಾವತಿ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಲಾರಿಗಳಿಂದ ವ್ಯಾಪಾರ ಮಾಡುತ್ತಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸುಳ್ಳು. ನಾನು ಲಾರಿ ಖರೀದಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇದೆ ಎಂದರೆ ಸಾಕ್ಷಿ ಈಗ ಇಲ್ಲ ಎಂದು ನುಡಿಯುತ್ತಾರೆ. ದಾವೆ ಹಾಕುವ ಕಾಲಕ್ಕೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಯಾರಿಂದ ಎಷ್ಟು ಹಣಕ್ಕೆ ಖರೀದಿ ಮಾಡಿದ್ದೇನೆ ಎಂದು ನ್ಯಾಯಾಲಯಕ್ಕೆ ಹೇಳಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹಾಗೂ ಆದಾಯಕ್ಕೆ ನನ್ನ ತಂದೆಯನ್ನು ಅವಲಂಬಸಿರುತ್ತೇನೆ ಎಂದರೆ ಸುಳುಳ.

ನಾನು ಎಲ್ಲಿಯವರೆಗೆ ಓದಿದ್ದೇನೆ ಎಂದರೆ ಸಾಕ್ಷಿ 10ನೇ ತರಗತಿ ಎಂದು ನುಡಿಯತ್ತಾರೆ. ನನ್ನ ತಾಯಿ ಸಾಕ್ಷ್ಯ ನೀಡಿರುವ ಬಗ್ಗೆ ತಿಳಿದುಕೊಂಡಿದ್ದೇನೆ ಎಂದರೆ ನಿಜ. ನಾನು ನನ್ನ ತಾಯಿ ಮತ್ತು ತಂದೆ ಜೊತೆ ಚೆನ್ನಾಗಿರಲಿಲ್ಲ ಎಂದು ಹೇಳಿರುವ ವಿಚಾರ

ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಚೆನ್ನಾಗಿರುವ ಕುರಿತು ನುಡಿಯುತ್ತಾರೆ. ವಾದಿ ನನ್ನ ತಾಯಿ ಎಂದರೆ ನಿಜ. ನಾನು ನನ್ನ ತಾಯಿ ಜೊತೆ ಚೆನ್ನಾಗಿರುವ ಕಾರಣ ದಾವೆ ಹಾಕಬೇಡಿ ಎಂದು ಹೇಳಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಏನು ಸಾಕ್ಷಿ ಹೇಳಿದ್ದಾರೆ ಎಯಿ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಆಧಾರ್ ಕಾರ್ಡ್ ನನ್ನ ಹೆಂಡತಿ ಮನೆಯ ವಿಳಾಸದಲ್ಲಿ ಇದೆ ಎಂದರೆ ಸುಳ್ಳು. ಸದರಿ ಆಧಾರ್ ಕಾರ್ಡ್ ನ್ಯಾಯಲಾಯಕಕ್ಕೆ ಹಾಜರುಮಾಡಬಹುದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಮದುವೆಯಾದ ನಂತರ ನನ್ನ ಹೆಂಡತಿ ಜೊತೆ ಬೇರೆ ವಾಸ ಇರುತ್ತೇನೆ ಹೊರತು ನನ್ನ ತಂದೆ ಜೊತೆ ಅಲ್ಲ ಎಂದರೆ ಸುಳ್ಳು.

ನಾನು ಎಷ್ಟು ವರ್ಷಗಳಿಂದ ಚಿರೆ ಕಲ್ಲಿನ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ 5 ವರ್ಷಗಳಿಂದ ಎಂದು ನುಡಿಯತ್ತಾರೆ. ನಾನು ಪರವಾನಿಗೆ ಪಡೆದುಕೊಂಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಕಲ್ಲಿನ ಕೋರೆಯನ್ನು ಗುತ್ತಿಗೆ ತೆಗೆದುಕೊಂಡಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸುಳ್ಳು. ನಾನು ಗುತ್ತಿಗೆ ಪಡೆಯುವಾಗ ಮೌಖಿಕವಾಗಿ ಪಡೆದಿದ್ದೇನಾ ಅಥವಾ ದಾಖಲೆ ಮಾಡಿದ್ದೇನಾ ಎಂದರೆ ಸಾಕ್ಷಿ ದಾಖಲೆ ಮಾಡಿಕೊಳ್ಳುವ ನಿಯಮ ಇಲ್ಲ ಎಂದು ನುಡಿಯುತ್ತಾರೆ. ನಾನು ಎಷ್ಟು ಜಮೀನು ಗುತ್ತಿಗೆಗೆ ಪಡೆದಿದ್ದೇನೆ ಎಂದರೆ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಎಷ್ಟು ಉತ್ಪತ್ತಿ ಬಂದಿದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ತಕರಾರಿನಲ್ಲಿ ವ್ಯಾಪಾರ ಮಾಡುತ್ತಿದ್ದೇನೆ ಎಂದು ತಿಳಿಸಿರುವ ವಿಚಾರ ಸುಳ್ಳಿನಿಂದ ಕೂಡಿದೆ ಎಂದರೆ ಸುಳ್ಳು.

ವಕೀಲರ ಕೊರಿಕೆಯ ಮೇರೆಗ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**